**ಕರ್ನಾಟಕ ವಿಧಾನಸಭೆ**
**ಹದಿನೈದನೇ ವಿಧಾನಸಭೆ**
**ಒಂಭತ್ತನೇ ಅಧಿವೇಶನ**
**(ಮುಂದುವರೆದ ಉಪವೇಶನ)**

# ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2021
**(2021ರ ವಿಧಾನಸಭೆಯ ವಿಧೇಯಕ ಸಂಖ್ಯೆ-22)**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು (1959 ರ ಕರ್ನಾಟಕ ಅಧಿನಿಯಮ ಸಂಖ್ಯೆ: 11) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ.

ಇದು, ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** ಈ ಅಧಿನಿಯಮವನ್ನು ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2)ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ .-**ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ ಸಂಖ್ಯೆ:11) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ (ಇ-1-ಎ) ಖಂಡಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಇ-1-ಎ) "ಪ್ರತಿನಿಧಿ" ಎಂದರೆ, ಮಹಾ ಸಭೆಯಲ್ಲಿ ಭಾಗವಹಿಸುವ ಮತ್ತು ಮತಚಲಾಯಿಸುವ ಅಧಿಕಾರದೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಆ ಸಹಕಾರ ಸಂಘವನ್ನು ಪ್ರತಿನಿಧಿಸಲು ಮತ್ತು ಆತ ಪ್ರತಿನಿಧಿ ಎಂದು ಯಾವುದಕ್ಕೆ ನೇಮಕವಾಗಿರುವನೋ ಆ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಅನುಮೋದಿಸಲು ಅಥವಾ ಬೆಂಬಲಿಸಲು ಮಂಡಳಿಯಿಂದ ನೇಮಕವಾದ ಸಹಕಾರ ಸಂಘದ ನಿರ್ದೇಶಕ."

**3.6ನೇಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 6ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ,-

(i) (ಬಿ) ಖಂಡದ ಬದಲಿಗೆ ಈ ಮುಂದಿನವನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

"(ಬಿ) ಎಲ್ಲಾ ಅರ್ಜಿದಾರರು ವ್ಯಕ್ತಿಗಳಾಗಿರುವಲ್ಲಿ, ಅರ್ಜಿದಾರರ ಸಂಖ್ಯೆಯು ಇಪ್ಪತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಅರ್ಜಿದಾರರು ಒಂದೇ ಕುಟುಂಬಕ್ಕೆ ಸೇರಿರತಕ್ಕದ್ದಲ್ಲ; ಮತ್ತು"

(ii) (ಬಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಬಿ-1) ಎಲ್ಲಾ ಅರ್ಜಿದಾರರು ಸಹಕಾರ ಸಂಘಗಳಾಗಿದ್ದಲ್ಲಿ, ಅರ್ಜಿದಾರರ ಸಂಖ್ಯೆಯು ಹದಿಮೂರಕ್ಕಿಂತ ಕಡಿಮೆ ಇರತಕ್ಕದ್ದಲ್ಲ:

ಪರಂತು ರಾಜ್ಯ ಸರ್ಕಾರವು ವಿಶೇಷ ಪ್ರಕರಣಗಳಲ್ಲಿ ಅರ್ಜಿದಾರ ಸಹಕಾರ ಸಂಘಗಳ ಸಂಖ್ಯೆಯು ಹದಿಮೂರಕ್ಕಿಂತ ಕಡಿಮೆಯಿದ್ದರೂ ಅದನ್ನು ಅನುಮತಿಸಬಹುದು."

**4. 17ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 17ನೇ ಪ್ರಕರಣದಲ್ಲಿ,-

(i) (1)ನೇ ಪ್ರಕರಣದ "ಎಫ್" ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಫ್) ಸಂಘದ ಅಥವಾ ಅದಕ್ಕೆ ಹಣಕಾಸು ಒದಗಿಸುವ ಬ್ಯಾಂಕು ಅಥವಾ ಅದರ ಒಕ್ಕೂಟ ಅಥವಾ ಅದರ ಸಂಯುಕ್ತ ಸಂಘದಿಂದ ಸಂಬಳ ಪಡೆಯುವ ಉದ್ಯೋಗಿಯಾಗಿದ್ದರೆ."

(ii) (2ಎ) ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2-ಎ) ಯಾರೇ ವ್ಯಕ್ತಿಯು ಒಂದೇ ಬಗೆಯ ವ್ಯವಹಾರ ನಡೆಸುತ್ತಿರುವ ಎರಡು ಅಥವಾ ಹೆಚ್ಚಿನ ಸಹಕಾರ ಸಂಘಗಳಲ್ಲಿ ಸದಸ್ಯನಾಗಿರುವುದು ಅಥವಾ ಸದಸ್ಯನಾಗಿ ಮುಂದುವರೆಯುತ್ತಿರುವುದು ಕಂಡುಬಂದಲ್ಲಿ, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2021 ರ ಪ್ರಾರಂಭದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯ ಒಳಗಾಗಿ ಆತನ ಆಯ್ಕೆಯ ಯಾವುದೇ ಒಂದು ಸಂಘದಲ್ಲಿ ಸದಸ್ಯತ್ವ ಉಳಿಸಿಕೊಳ್ಳುವುದು ಆತನಿಗೆ ಬಾದ್ಯವಾಗಿರತಕ್ಕದ್ದು. ಹಾಗೆ ಮಾಡಲು ಆತನು ವಿಫಲನಾದರೆ, ಆತ ಹೊಸದಾಗಿ ಯಾವ ಸಹಕಾರ ಸಂಘಕ್ಕೆ ಸೇರಿರುವನೋ ಅದರ ಸದಸ್ಯತ್ವವು ನಿಂತು ಹೋಗುವುದೆಂದು ಭಾವಿಸತಕ್ಕದ್ದು."

**5. 20ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 20ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ,-

(i) (ಎiii) ಖಂಡದ ಪರಂತುಕದ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪರಂತು ಈ ಖಂಡದಲ್ಲಿರುವುದು ಯಾವುದೂ ಅದರ ನೋಂದಣಿಯಾದ ನಿಕಟ ತರುವಾಯ ನಡೆಯುವ ಅಂಥ ಸಂಘದ ಮೊದಲ ಮಹಾಸಭೆಯಲ್ಲಿ ಮತ್ತು ಸಂಘದ ಆಡಳಿತ ಮಂಡಳಿಯ ಮೊದಲ ಚುನಾವಣೆಯಲ್ಲಿ ಭಾಗವಹಿಸುವ ಸದಸ್ಯನಿಗೆ ಅನ್ವಯವಾಗತಕ್ಕದಲ್ಲ."

(ii) (ಎ-iv) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ-iv) ಆತನಿಗೆ ಯುಕ್ತವಾಗಿ ತಿಳಿಸಲಾದ ಕಳೆದ ಐದು ವಾರ್ಷಿಕ ಮಹಾ ಸಭೆಗಳ ಪೈಕಿ ಕನಿಷ್ಟ ಯಾವುದೇ ಎರಡು ವಾರ್ಷಿಕ ಮಹಾ ಸಭೆಗೆ ಹಾಜರಾಗಲು ವಿಫಲನಾದ ಒಬ್ಬ ಸದಸ್ಯ, ಒಬ್ಬ ಪ್ರತಿನಿಧಿ ಅಥವಾ ಒಬ್ಬ ನಿಯೋಗಿ."

(iii) ಪರಂತುಕವನ್ನು ಹೊರತುಪಡಿಸಿ (ಎ-V) ಖಂಡದ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ-V) ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕನಿಷ್ಟ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ವಿಫಲನಾದ ಒಬ್ಬ ಸದಸ್ಯ ಅಥವಾ ಒಬ್ಬ ಪ್ರತಿನಿಧಿ."

(iv) (ಎ-V) ಖಂಡದ ಅಡಿಯಲ್ಲಿನ ಪರಂತುಕದಲ್ಲಿ "ಮೂರು ವರ್ಷಗಳ" ಎಂಬ ಪದಗಳಿಗೆ "ಒಂದು ವರ್ಷದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(v) (ಬಿ) ಖಂಡದಲ್ಲಿನ ವಿವರಣೆಯಲ್ಲಿ "ಹದಿನೈದು ದಿನಗಳಿಗೆ" ಮತ್ತು "ಮೂವತ್ತು ದಿನಗಳಿಗೆ" ಎಂಬ ಪದಗಳ ಬದಲಿಗೆ "ಇಪ್ಪತ್ತೊಂದು ದಿನಗಳಿಗೆ" ಮತ್ತು "ನಲವತ್ತೈದು ದಿನಗಳಿಗೆ" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು;

**6. 22ನೇ ಹೊಸ ಪ್ರಕರಣದ ಸೇರ್ಪಡೆ.-** ಮೂಲ ಅಧಿನಿಯಮದ 21ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"22. ಷೇರುಗಳನ್ನು ಹೊಂದಿರುವುದರ ಮೇಲೆ ನಿರ್ಬಂಧಗಳು:-** ಯಾವುದೇ ಸಹಕಾರಿ ಸಂಘದಲ್ಲಿ, ಸರ್ಕಾರವಲ್ಲದ ಯಾರೇ ಸದಸ್ಯನು ಅಥವಾ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಪಡೆದು ಯಾವುದೇ ಇತರ ಸಹಕಾರ ಸಂಘ, ರಾಜ್ಯ ಉಗ್ರಾಣ ನಿಗಮ ಅಥವಾ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಅಡಿಯಲ್ಲಿ ರಚಿಸಲಾದ ಜಿಲ್ಲಾ ಪಂಚಾಯಿತಿ ಅಥವಾ ಯಾವುದೇ ಶಾಸನಬದ್ದ ಅಥವಾ ಶಾಸನಬದ್ದವಲ್ಲದ ಮಂಡಳಿ, ಸಮಿತಿ ಅಥವಾ ನಿಗಮವು ನಿಯಮಿಸಬಹುದಾದಂತೆ ಸಂಘದ ಒಟ್ಟು ಷೇರು ಬಂಡವಾಳದಲ್ಲಿ ಶೇಕಡ ಐದರಷ್ಟನ್ನು ಮೀರದಂಥ ಭಾಗಕ್ಕಿಂತ ಹೆಚ್ಚಿನ ಷೇರನ್ನು ಹೊಂದತಕ್ಕದ್ದಲ್ಲ:"

**7. 27ಎ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 27ನೇ ಪ್ರಕರಣದಲ್ಲಿ,-

(i) (ಎ) ಖಂಡದಲ್ಲಿ "ಮೂರು" ಎಂಬ ಪದದ ಬದಲಿಗೆ "ಎರಡು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು;

(ii) (ಬಿ) ಖಂಡದಲ್ಲಿ "ಉಪವಿಧಿಗಳಲ್ಲಿ" ಎಂಬ ಪದದ ಮೊದಲಿಗೆ "ಕಳೆದ ಐದು ಸಹಕಾರಿ ವರ್ಷಗಳಲ್ಲಿ ಯಾವುದೇ ಎರಡು ಸಹಕಾರಿ ವರ್ಷಗಳಿಗಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(iii) ಪರಂತುಕದಲ್ಲಿ "ಮೂರು ವರ್ಷಗಳ" ಎಂಬ ಪದಗಳ ಬದಲಿಗೆ "ಒಂದು ವರ್ಷ"ದ ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**8. 28ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 28ನೇ ಪ್ರಕರಣದ (2)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(3) ವಿಶೇಷ ಮಹಾಸಭೆಗಾಗಿ ಕೋರಂ, 27ನೇ ಪ್ರಕರಣದ (4) ನೇ ಉಪ-ಪ್ರಕರಣದಲ್ಲಿ ನಿರ್ಧಿಷ್ಟಪಡಿಸಿದಂತೆಯೇ ಇರತಕ್ಕದ್ದು."

**9. 29 ಸಿ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 29ಸಿ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದ (ಎ) ಖಂಡದಲ್ಲಿ "ಸಹಕಾರ ಸಂಘಕ್ಕೆ" ಎಂಬ ಪದಗಳ ತರುವಾಯ "ಅಥವಾ ಸೌಹಾರ್ದ ಸಹಕಾರಿಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) (8)ನೇ ಉಪಪ್ರಕರಣದ (ಡಿ) ಖಂಡದಲ್ಲಿ "ಅನರ್ಹಗೊಳಿಸಬಹುದು" ಎಂಬ ಪದದ ಬದಲಿಗೆ "ತೆಗೆದುಹಾಕಬಹುದು ಮತ್ತು ಅನರ್ಹಗೊಳಿಸಬಹುದು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**10. 29ಇ ಪ್ರಕರಣದ ತಿದ್ದುಪಡಿ,-** ಮೂಲ ಅಧಿನಿಯಮದ 29ಇ ಪ್ರಕರಣದಲ್ಲಿ, ಮೊದಲ ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು ಮಂಡಳಿಯ ಅಂತಹ ರಿಕ್ತ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ, ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ, ಅದೇ ವರ್ಗದ ಸದಸ್ಯರುಗಳ ಪೈಕಿ ನಾಮನಿರ್ದೇಶನದ ಮೂಲಕ ಮಂಡಳಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು."

**11. 39 ಎಎ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 39 ಎಎ ಪ್ರಕರಣದ, (2)ನೇ ಉಪ-ಪ್ರಕರಣದಲ್ಲಿ "ಮತದಾರ ಪಟ್ಟಿಗಳನ್ನು" ಎಂಬ ಪದಗಳ ಬದಲಿಗೆ "ಮತದಾರರ ಪಟ್ಟಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**12. 39ಐ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 39ಐ ಪ್ರಕರಣದಲ್ಲಿ,-

(i) (4)ನೇ ಉಪ-ಪ್ರಕರಣದಲ್ಲಿ "ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳೆಂದರೆ" ಎಂಬ ಪದಗಳ ತರುವಾಯ "ಚುನಾವಣಾ ಅಧಿಕಾರಿಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ii) "ಪೋಲಿಂಗ್ ಆಫೀಸರ್ ಗಳು ಮತ್ತು" ಎಂಬ ಪದಗಳ ತರುವಾಯ "ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದಕ್ಕಾಗಿ ಅಥವಾ " ಎಂಬ ಪದಗಳನ್ನು ಸೇರಿಸತಕ್ಕದ್ದು.

**13. 68ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 68ನೇ ಪ್ರಕರಣದಲ್ಲಿ, (1)ನೇ ಉಪಪ್ರಕರಣದಲ್ಲಿ:-

(i) "ನಿರ್ದೇಶಿಸಬಹುದು" ಎಂಬ ಪದದ ಬದಲಿಗೆ " ನಿರ್ದೇಶಿಸತಕ್ಕದ್ದು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) "ಪದಾಧಿಕಾರಿಗಳನ್ನು" ಎಂಬ ಪದದ ತರುವಾಯ "63ನೇ ಪ್ರಕರಣದ ಅಡಿಯಲ್ಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಅಥವಾ" ಎಂಬ ಪದಗಳನ್ನು ಸೇರಿಸತಕ್ಕದ್ದು.

**14. 72 ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 72ನೇ ಪ್ರಕರಣದ (5)ನೇ ಉಪಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

"(6) ಮೇಲ್ಕಂಡ (1), (2) ಮತ್ತು (5) ನೇ ಉಪಪ್ರಕರಣಗಳ ಅಡಿಯಲ್ಲಿ ಸಹಕಾರ ಸಂಘದ ಸಮಾಪನಗೊಳಿಸುವ ಪ್ರಕ್ರಿಯೆಯು ರಿಜಿಸ್ಟ್ರಾರ್ ಅವರು ನಿರ್ದೇಶನ ನೀಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗೆ ಮುಕ್ತಾಯಗೊಳ್ಳತಕ್ಕದ್ದು:

ಪರಂತು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ರಿಜಿಸ್ಟ್ರಾರ್‌ರು, ಸದರಿ ಅವಧಿಯನ್ನು ಒಂದು ವರ್ಷದ ಮತ್ತೊಂದು ಅವಧಿಗೆ ವಿಸ್ತರಿಸಬಹುದು:

ಮತ್ತು ಪರಂತು ರಾಜ್ಯ ಸರ್ಕಾರವು, ರಿಜಿಸ್ಟ್ರಾರನು ಮಾಡಿದ ವರದಿಯ ಮೇಲೆ, ವಿಸ್ತರಣೆಗಾಗಿ ನೈಜ ಕಾರಣಗಳಿವೆಯೆಂದು ಮನಗಂಡರೆ, ದಾಖಲಿಸಬೇಕಾದ ಕಾರಣಗಳಿಗಾಗಿ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಹೊಂದಿರತಕ್ಕದ್ದು."

**15. 128 ಎ ಪ್ರಕರಣದ ಸೇರ್ಪಡೆ.-** ಮೂಲ ಅಧಿನಿಯಮದ128ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

**"128-ಎ ಸಾಮಾನ್ಯ ವೃಂದದ ರಚನೆ.-** (1) ಈ ಅಧಿನಿಯಮದಲ್ಲಿ, ಅದರಡಿಯಲ್ಲಿ ರಚಿಸಲಾದ ನಿಯಮಗಳು ಅಥವಾ ಉಪವಿಧಿಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸಹಕಾರ ಚಳವಳಿಯ ಹಿತದೃಷ್ಟಿಯಿಂದ ರಿಜಿಸ್ಟ್ರಾರ್‌ರವರು ಸರ್ಕಾರದಿಂದ ಗಣನೀಯವಾಗಿ ಹಣಕಾಸು ನೆರವು ಪಡೆಯುತ್ತಿರುವ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರದ ಗಣನೀಯ ಸರ್ಕಾರಿ ಯೋಜನೆ ಅಥವಾ ವ್ಯವಹಾರವನ್ನು ನಡೆಸುತ್ತಿರುವ ಅಥವಾ ಅದರ ಉದ್ಯಮವಾಗಿರುವ (ಇದರಲ್ಲಿ ಇನ್ನು ಮುಂದೆ ಸಂಯೋಜನೆ ಪಡೆದ ಸಂಘವೆಂದು ಉಲ್ಲೇಖಿಸಲಾಗಿದೆ) ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿನ ನೌಕರರ ಸಾಮಾನ್ಯ ವೃಂದದ ರಚನೆಯು ಅವಶ್ಯಕವಾಗಿದೆಯೆಂದು ಪರಿಗಣಿಸಿದಲ್ಲಿ, ಆತನು ಅಂತಹ ವರ್ಗದ ಸಹಕಾರಿ ಸಂಘಗಳು ಸಂಯೋಜಿತವಾಗಿರುವ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ಆತನಿಂದ ನಿರ್ದಿಷ್ಟಪಡಿಸಬಹುದಾದಂಥ ಸಹಕಾರಿ ಸಂಘಗಳ ಮುಖ್ಯ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ನೇಮಕಾತಿ, ವರ್ಗಾವಣೆ ಮತ್ತು ಶಿಸ್ತುಕ್ರಮದ ಅಧಿಕಾರವನ್ನು ಚಲಾಯಿಸುವ ಹಾಗೂ ಸದರಿ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಅವಶ್ಯವೆನಿಸಬಹುದಾದಂಥ ವಿನಿಮಯಗಳನ್ನು ರಚಿಸಲು ಅಧಿಕಾರವನ್ನು ಅಧಿಕೃತಗೊಳಿಸಬಹುದು. ಅಂಥ ಸಂಯುಕ್ತ ಸಹಕಾರಿ ಬ್ಯಾಂಕು ರಿಜಿಸ್ಟ್ರಾರ್‌ರವರಿಂದ ಹಾಗೆ ಅಧಿಕೃತಗೊಳಿಸಿದ್ದಲ್ಲಿ, ಸಂಯೋಜಿತ ಸಹಕಾರ ಸಂಘಗಳು ವಿನಿಯಮಗಳು ಅನುಮತಿಸಬಹುದಾದಷ್ಟರ ಮಟ್ಟಿಗೆ ಹೊರತುಪಡಿಸಿ ಅಂತಹ ವರ್ಗಗಳ ಸಿಬ್ಬಂದಿಗಳೊಂದಿಗೆ ವ್ಯವಹರಿಸುವ ಅಧಿಕಾರವನ್ನು ಹೊಂದಿರತಕ್ಕದ್ದಲ್ಲ.

(2) ರಿಜಿಸ್ಟ್ರಾರರು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಅಂಥ ಉದ್ದೇಶಕ್ಕಾಗಿ ಭರಿಸಿದ ಹಾಗೂ ಭರಿಸಬಹುದಾದ ವೆಚ್ಚಕ್ಕಾಗಿ ಪ್ರತೀವರ್ಷ ಅಂತಹ ಮೊತ್ತವನ್ನು ವಂತಿಗೆಯಾಗಿ ನೀಡುವಂತೆ ಸಂಯೋಜಿತ ಕೃಷಿ ಸಹಕಾರಿ ಪತ್ತಿನ ಸಂಘಗಳಿಗೆ ಅಗತ್ಯಪಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು. ರಿಜಿಸ್ಟ್ರಾರ್‌ರಿಂದ ನಿರ್ದಿಷ್ಟಪಡಿಸಬಹುದಾದ ಅಂಥ ಪ್ರಾಧಿಕಾರಕ್ಕೆ ಮತ್ತು ಆತನಿಂದ ನಿಗದಿಪಡಿಸಿದ ಅವಧಿಯ ಒಳಗಾಗಿ ಸದರಿ ಮೊತ್ತವನ್ನು ಪಾವತಿ ಮಾಡಲು ಯಾವುದೇ ಸಹಕಾರಿ ಸಂಘ ವಿಫಲವಾದರೆ, ರಿಜಿಸ್ಟ್ರಾರ್‌ರವರು ಪ್ರಾಧಿಕಾರದ ಅರ್ಜಿಯ ಮೇಲೆ ಅಂಥ ಮೊತ್ತವನ್ನು ಪಾವತಿಸುವಂತೆ ಸಂಯೋಜಿತ ಸಹಕಾರ ಸಂಘಕ್ಕೆ ಆದೇಶಿಸಬಹುದು ಮತ್ತು 71ನೇ ಪ್ರಕರಣದ ಅಡಿಯಲ್ಲಿ ಐತೀರ್ಪು ಆಗಿದ್ದರೆ ಹೇಗೋ ಹಾಗೆ ಪ್ರತಿಯೊಂದು ಅಂಥ ಆದೇಶವನ್ನು ಸಹಕಾರಿ ಸಂಘದ ವಿರುದ್ಧ ಜಾರಿಗೊಳಿಸತಕ್ಕದ್ದು."

**16. ಸಹಕಾರ ಚುನಾವಣಾ ಪ್ರಾಧಿಕಾರದ ಪದಾವಳಿಯ ಪ್ರತಿಯೋಜನೆ.-** ಮೂಲ ಅಧಿನಿಯಮದಲ್ಲಿ "ಸಹಕಾರ ಚುನಾವಣೆ ಆಯೋಗ" ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ, "ಸಹಕಾರ ಚುನಾವಣಾ ಪ್ರಾಧಿಕಾರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು (1959ರ ಕರ್ನಾಟಕ ಅಧಿನಿಯಮ ಸಂ 11) ಈ ಮುಂದಿನ ಕಾರಣಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(ಎ) 17(2ಎ) ಪ್ರಕರಣ, 20(2)(ಎ-v) ಪ್ರಕರಣ ಮತ್ತು 27ಎ ಪ್ರಕರಣದ ಪರಂತುಕದಲ್ಲಿ ಮತದಾನದ ಹಕ್ಕುಗಳು ಮತ್ತು ಸದಸ್ಯತ್ವಕ್ಕೆ ಸಂಬಂಧಿಸಿದ ವಿರೋಧಾತ್ಮಕವಾದ ಕೆಲವು ಉಪಬಂಧಗಳನ್ನು ಬಿಟ್ಟುಬಿಡಲು;

(ಬಿ) 20(2)(ಎ-iv) ಮತ್ತು (ಎ-v) ಪ್ರಕರಣವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕದ ಉಚ್ಚನ್ಯಾಯಾಲಯದ ಮುಂದೆ ಹೂಡಲಾದ ರಿಟ್ ಅರ್ಜಿಗಳಲ್ಲಿ ಪ್ರಶ್ನಿಸಲಾದ ವಿವಾದಗಳನ್ನು ಪರಿಹರಿಸಲು;

(ಸಿ) ಸರ್ವ ಸದಸ್ಯರ ಸಭೆಗಳಲ್ಲಿ ಭಾಗವಹಿಸುವಲ್ಲಿ ಮತ್ತು ಸಹಕಾರ ಸಂಘದ ಕನಿಷ್ಠ ಸೇವೆಗಳನ್ನು ಬಳಸಿಕೊಳ್ಳಲು ಮತ್ತು ಸಹಕಾರ ಸಂಘಗಳ ವ್ಯವಸ್ಥಾಪನೆಯಲ್ಲಿ ಸದಸ್ಯರ ಸಕ್ರಿಯ ಭಾಗವಹಿಸುವಿಕೆಯಲ್ಲಿ ಪ್ರಜಾಪ್ರಭುತ್ವದ ನೈಜ ಆಶಯವನ್ನು ಒತ್ತಿ ಹೇಳಲು;

(ಡಿ) ನಿಗದಿಪಡಿಸಿದ ಅವಧಿಯಲ್ಲಿ ಸಹಕಾರ ಬ್ಯಾಂಕು/ ಸಂಘಗಳ ಸಮಾಪನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಭಾರತದ ರಿಸರ್ವಬ್ಯಾಂಕ್‌ನಿಂದ ಮಾಡಲಾದ ಸಲಹೆಗಳ ಅನುಷ್ಠಾನಗೊಳಿಸಲು;

-ಸ್ಪಷ್ಟತೆಯನ್ನು ನೀಡಲು ಕೆಲವು ತತ್ಪರಿಣಾಮವಾದ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತ ಜ್ಞಾಪನ ಪತ್ರ

| | |
|---|---|
| ಖಂಡ 6: | ಸದಸ್ಯನು ಹೊಂದಿರುವ ಷೇರು ಬಂಡವಾಳದ ಭಾಗವು ಸಂಘದ ಒಟ್ಟು ಷೇರು ಬಂಡವಾಳದ ಶೇಕಡಾ ಐದರಷ್ಟನ್ನು ಮೀರದಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ವಾಡಿಕೆಯ ಸ್ವರೂಪದ್ದಾಗಿದೆ

**ಎಸ್.ಟಿ. ಸೋಮಶೇಖರ್**
ಸಹಕಾರ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

## ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ ಸಂಖ್ಯೆ. 11) ಉದ್ಧೃತ ಭಾಗ

**X X XX XX**

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

**X X XX XX**

(ಇ-1-ಎ) `ಪ್ರತಿನಿಧಿ' ಎಂದರೆ, ಇತರ ಸಹಕಾರಿ ಸಂಘಗಳಲ್ಲಿ ಆ ಸಹಕಾರಿ ಸಂಘವನ್ನು ಪ್ರತಿನಿಧಿಸುವ ಮಂಡಳಿಯಿಂದ ನೇಮಿಸಲ್ಪಟ್ಟ ಸಹಕಾರಿ ಸಂಘದ ಮಂಡಳಿಯ ಒಬ್ಬ ಸದಸ್ಯ.

**X X XX XX**

6. **ಸಹಕಾರ ಸಂಘಗಳ ನೋಂದಣಿಗಾಗಿ ಅರ್ಜಿ.-** (1) ಯಾವುದೊಂದು ಸಹಕಾರ ಸಂಘದ ನೋಂದಣಿಗಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿಧಿ ವಿಧಾನಗಳನ್ನು ಪಾಲಿಸಿದ ತರುವಾಯ ರಿಜಿಸ್ಟ್ರಾರನಿಗೆ ಅರ್ಜಿಯನ್ನು ಸಲ್ಲಿಸತಕ್ಕುದು; ಮತ್ತು ಅರ್ಜಿದಾರರು ಸಂಘದ ವಿಷಯದಲ್ಲಿ ಅವನು ಅಗತ್ಯಪಡಿಸಬಹುದಾದಂಥ ಎಲ್ಲ ಮಾಹಿತಿಯನ್ನು ಒದಗಿಸತಕ್ಕುದು.

(2) ಅಂಥ ಪ್ರತಿಯೊಂದು ಅರ್ಜಿಯು, ಈ ಮುಂದಿನ ಅಗತ್ಯಗಳಿಗೆ ಅನುಗುಣವಾಗಿ ಇರತಕ್ಕುದು, ಎಂದರೆ:-

(ಎ) ಅರ್ಜಿಯ ಜೊತೆಯಲ್ಲಿ ಸಹಕಾರ ಸಂಘದ ಪ್ರಸ್ತಾವಿತ ಉಪವಿಧಿಗಳ ಐದು ಪ್ರತಿಗಳನ್ನು ಲಗತ್ತಿಸತಕ್ಕುದು;

(ಬಿ) ಎಲ್ಲ ಅರ್ಜಿದಾರರು ವ್ಯಕ್ತಿಗಳಾಗಿರುವಲ್ಲಿ, ಅರ್ಜಿದಾರರ ಸಂಖ್ಯೆಯು ಹತ್ತಕ್ಕಿಂತ ಕಡಿಮೆ ಇರತಕ್ಕುದಲ್ಲ;

(ಸಿ) ಅರ್ಜಿದಾರರಲ್ಲಿ ಪ್ರತಿಯೊಬ್ಬನು ಹದಿನೆಂಟು ವರ್ಷಗಳಿಗೆ ಮೇಲ್ಪಟ್ಟ ವಯಸ್ಸಿನ ವ್ಯಕ್ತಿಯಾಗಿರತಕ್ಕುದು. ಮತ್ತು ಅರ್ಜಿದಾರರು ಅದೇ ಕುಟುಂಬ ದವರಾಗಿರತಕ್ಕುದಲ್ಲ;

**ವಿವರಣೆ:-** ಈ ಖಂಡದ ಉದ್ದೇಶಕ್ಕಾಗಿ, ವ್ಯಕ್ತಿಗೆ ಸಂಬಂಧಪಟ್ಟಂತೆ ಕುಟುಂಬ ಎಂದರೆ ವ್ಯಕ್ತಿ, ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ, ಮತ್ತು ಅವರನ್ನು ಅವಲಂಬಿಸಿರುವ ಮಕ್ಕಳು ಮತ್ತು ತಂದೆ ತಾಯಿಗಳು;

(ಡಿ) ಸದಸ್ಯರಿಗೆ ಸಾಲ ಕೊಡಲು ನಿಧಿಗಳ ರಚನೆ ಸೇರಿದಂತೆ ಸಹಕಾರ ಸಂಘದ ಉದ್ದೇಶಗಳಲ್ಲಿ ಒಂದೇ ಆಗಿದ್ದರೆ ಮತ್ತು ಎಲ್ಲ ಅರ್ಜಿದಾರರು ವ್ಯಕ್ತಿಗಳಾಗಿದ್ದರೆ, ಅರ್ಜಿದಾರರು ಒಂದೇ ಗ್ರಾಮದಲ್ಲಿ ಅಥವಾ ಪಟ್ಟಣದಲ್ಲಿ ಅಥವಾ ಸಹಕಾರ ಸಂಘದ ಕಾರ್ಯಾಚರಣೆಯ ಉದ್ದೇಶಿತ ಪ್ರದೇಶದಲ್ಲಿವಾಸಮಾಡುವವರು ಅಥವಾ ಒಂದೇ ಜನವರ್ಗಕ್ಕೆ ಸಂಬಂಧಿಸಿದವರು ಅಥವಾ ಒಂದೇ ವೃತ್ತಿಯನ್ನು ಅನುಸರಿಸುವವರು ಆಗಿರತಕ್ಕುದು;

(ಇ) ಅರ್ಜಿದಾರರಲ್ಲಿ ವ್ಯಕ್ತಿಯಾಗಿರುವ ಪ್ರತಿಯೊಬ್ಬರೂ ಮತ್ತು ಅರ್ಜಿದಾರನಾಗಿರುವ ಯಾವುದೇ ಸಹಕಾರ ಸಂಘದ ಪರವಾಗಿ ಯುಕ್ತವಾಗಿ ಅಧಿಕೃತ ವ್ಯಕ್ತಿಯು ಅರ್ಜಿಗೆ ಸಹಿ ಮಾಡತಕ್ಕುದು;

(ಎಫ್) ಅರ್ಜಿಯೊಂದಿಗೆ ನಿಯಮಿಸಬಹುದಾದಂಥ ಶುಲ್ಕವನ್ನು ಸಲ್ಲಿಸಿರತಕ್ಕುದ್ದು ಮತ್ತು ಸಹಕಾರ ಸಂಘಗಳ ಬೇರೆ ಬೇರೆ ವರ್ಗಕ್ಕೆ ಅಥವಾ ವರ್ಗಗಳಿಗೆ ಬೇರೆ ಬೇರೆ ಶುಲ್ಕವನ್ನು ನಿಯಮಿಸಬಹುದು.

(ಜಿ) ಈ ಅಧಿನಿಯಮದ ಅಡಿಯಲ್ಲಿ ಸಹಕಾರ ಸಂಘವಾಗಿ ಪರಿವರ್ತನೆ ಹೊಂದುವ ಉದ್ದೇಶವನ್ನು ಹೊಂದಿರುವ ಸಹಕಾರಿಯ ಸಂದರ್ಭದಲ್ಲಿ, ಅಂಥ ಪರಿವರ್ತನೆಯನ್ನು ಅನುಮೋದಿಸುವ ಅಂಥ ಸಹಕಾರಿಯ ಸಾಮಾನ್ಯ ಸಭೆಯ ಗೊತ್ತುವಳಿಯು ಅರ್ಜಿಯ ಜೊತೆಯಲ್ಲಿ ಇರತಕ್ಕದ್ದು.

**X X XX XX**

17. **ಸದಸ್ಯತ್ವಕ್ಕೆ ಅನರ್ಹತೆ.-** (1) ಯಾರೇ ವ್ಯಕ್ತಿಯು,-

(ಎ) ತಾನು ದಿವಾಳಿಯೆಂದು ನ್ಯಾಯನಿರ್ಣಯ ಪಡೆಯಲು ಅರ್ಜಿಹಾಕಿಕೊಂಡಿದ್ದರೆ ಅಥವಾ ಅನನ್ಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಬಿ) ರಾಜಕೀಯ ಸ್ವರೂಪದ ಅಪರಾಧವಾಗಿರದ ಅಥವಾ ನೈತಿಕ ಅಧಃಪತನದ ಅಪರಾಧಕ್ಕಾಗಿ ಶಿಕ್ಷೆ ವಿಧಿಸಲ್ಪಟ್ಟು, ಅಂಥ ಶಿಕ್ಷೆಯ ತೀರ್ಪು ವಿಪರ್ಯಯವಾಗಿರದಿದ್ದರೆ ಅಥವಾ ಅಂಥ ಅಪರಾಧವು ಕ್ಷಮಿಸಲ್ಪಡದಿದ್ದರೆ, ಮತ್ತು ಅಂಥ ಶಿಕ್ಷೆ ಮುಗಿದ ತಾರೀಖಿನಿಂದ ಐದು ವರ್ಷಗಳ ಅವಧಿ ಗತಿಸಿರದಿದ್ದರೆ;

(ಸಿ) ಅಂಥ ಸಹಕಾರ ಸಂಘವು ನಡೆಸುವಂಥ ಬಗೆಯ ವ್ಯವಹಾರವನ್ನು ನಡೆಸುತ್ತಿದ್ದರೆ ;

(ಡಿ) ಅದೇ ಬಗೆಯ ವ್ಯವಹಾರವನ್ನು ನಡೆಸುತ್ತಿರುವ ಸಹಕಾರ ಸಂಘಕ್ಕೆ ಅದಾಗಲೇ ಸದಸ್ಯನಾಗಿದ್ದರೆ

- ಅವನು ಸದಸ್ಯನಾಗಿ ಪ್ರವೇಶ ಪಡೆಯಲು ಅರ್ಹನಾಗತಕ್ಕುದಲ್ಲ.

(ಇ) 16ನೇ ಪ್ರಕರಣದ ಅಡಿಯಲ್ಲಿ ಸದಸ್ಯತ್ವ ಪಡೆಯಲು ಅರ್ಹನಾಗಿಲ್ಲದಿದ್ದರೆ;

(ಎಫ್) ಸಂಘದ ಅಥವಾ ಅದಕ್ಕೆ ಹಣಕಾಸು ಒದಗಿಸುವ ಬ್ಯಾಂಕಿನಿಂದ ಸಂಬಳ ಪಡೆಯುವ ಉದ್ಯೋಗಿಯಾಗಿದ್ದರೆ; ಅಥವಾ

- ಅವನು ಸದಸ್ಯನಾಗಿ ಪ್ರವೇಶ ಪಡೆಯಲು ಅರ್ಹನಾಗತಕ್ಕುದಲ್ಲ.

(2) ಸದಸ್ಯನು, (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸುವ ಅನರ್ಹತೆಗಳಲ್ಲಿ ಯಾವುದಾದರೊಂದಕ್ಕೆ ಒಳಪಟ್ಟಿದ್ದರೆ, ಅನರ್ಹನಾದ ದಿನಾಂಕದಿಂದ ಅವನು ಸದಸ್ಯನಾಗಿರುವುದು ಕೊನೆಗೊಂಡಿತೆಂದು ಭಾವಿಸತಕ್ಕುದು.

(2ಎ) ಸದಸ್ಯನು ಅಧಿನಿಯಮ, ನಿಯಮಗಳ ಅಥವಾ ಉಪ ವಿಧಿಗಳ ಮೇರೆಗೆ ಸದಸ್ಯನಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಸತತವಾಗಿ ಮೂರು ವರ್ಷಗಳ ಕಾಲ ವಿಫಲನಾದರೆ, ಅವನು ಅಂಥ ಅವಧಿ ಮುಗಿದಾಗ ಸದಸ್ಯನಾಗಿರುವುದು ನಿಂತುಹೋಗತಕ್ಕುದು.

XX XX XX

**20. ಸದಸ್ಯರ ಮತಗಳು.-** (1) ಸಹಕಾರ ಸಂಘದ ಯಾರೇ ಸದಸ್ಯನು, ಯಾವನೇ ಪ್ರತಿ ನಿಧಿಯು ಅಥವಾ ಯಾವನೇ ನಿಯೋಗಿಯು ಸಂಘದ ಮಹಾಸಭೆ ಅಥವಾ ಮಂಡಳಿಯ ಸದಸ್ಯರ ಚುನಾವಣೆಯಲ್ಲಿ ಒಂದಕ್ಕಿಂತ ಹೆಚ್ಚು ಮತವನ್ನು ಹೊಂದಿರತಕ್ಕುದಲ್ಲ:

(2) ಈ ಕೆಳಕಂಡ ವ್ಯಕ್ತಿಗಳು, ತಾವು ಸದಸ್ಯರಾಗಿರುವ ಸಹಕಾರ ಸಂಘದ ಮಹಾಸಭೆ ಅಥವಾ ಮಂಡಳಿಯ ಸದಸ್ಯರ ಚುನಾವಣೆಯಲ್ಲಿ ಮತಚಲಾಯಿಸಲು ಹಕ್ಕನ್ನು ಹೊಂದಿರತಕ್ಕುದಲ್ಲ, ಎಂದರೆ:

(ಎ) ನಾಮ ಮಾತ್ರ ಸದಸ್ಯ ಅಥವಾ ಸಹವರ್ತಿ ಸದಸ್ಯ;

(ಎ-i) ಬಾಕಿದಾರನಾದ ಒಬ್ಬ ಸದಸ್ಯ;

(ಎ-ii) 16ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ), (ಇ), (ಎಫ್), ಮತ್ತು (ಜಿ) ಖಂಡಗಳ ಮೇರೆಗೆ ಸೇರಿಸಿಕೊಂಡ ಬಾಕಿದಾರರಾಗಿರುವ ಸದಸ್ಯರು;

(ಎ-iii) ಅಂಥ ಸಭೆಯ ದಿನಾಂಕಕ್ಕೆ ಅಥವಾ ಚುನಾವಣೆಗೆ ಮುಂಚಿತವಾಗಿ ಹನ್ನೆರಡು ತಿಂಗಳ ಒಳಗೆ ಸಂಘದ ಸದಸ್ಯನಾದ ಒಬ್ಬ ವ್ಯಕ್ತಿ;

ಪರಂತು, ಈ ಖಂಡದಲ್ಲಿರುವುದು ಯಾವುದೂ, ಅದರ ನೋಂದಣಿಯಾದ ತರುವಾಯ ತಕ್ಷಣವೇ ನಡೆದ ಅಂಥ ಸಂಘದ ಮೊದಲ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸುವ ಸಂಘದ [2][ಸದಸ್ಯನಿಗೆ][2] ಅನ್ವಯವಾಗತಕ್ಕುದಲ್ಲ.

(ಎ-iv) ಕಳೆದ ಐದು ಮಹಾಸಭೆಗಳ ಪೈಕಿ ಮೂರು ಮಹಾಸಭೆಗಳಿಗೆ ಹಾಜರಾಗಲು ತಪ್ಪುವ ಒಬ್ಬ ಸದಸ್ಯ, ಒಬ್ಬ ಪ್ರತಿನಿಧಿ ಅಥವಾ ಒಬ್ಬ ನಿಯೋಗಿ.

(ಎ-v) ಮೂರು ನಿರಂತರ ಸಹಕಾರ ವರ್ಷಗಳವರೆಗೆ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಬಹುದಾದಂತೆ ಅಂಥ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಒಬ್ಬ ಸದಸ್ಯ ಅಥವಾ ಪ್ರತಿನಿಧಿ.

ಪರಂತು, (ಎ-iv) ಹಾಗೂ (ಎ-v)ನೇ ಉಪಖಂಡಗಳಲ್ಲಿರುವ ಸದಸ್ಯರುಗಳ ಸಂದರ್ಭದಲ್ಲಿ, ಅಂಥ ಸದಸ್ಯರು ಮೂರು ವರ್ಷಗಳ ಅವಧಿಗೆ ಸರ್ವಸದಸ್ಯರ ಸಭೆ ಅಥವಾ ಮಂಡಳಿಯ ಸದಸ್ಯರ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(ಬಿ) (i) ಯಾವ ಸಹಕಾರ ಸಂಘದ ಸಮಿತಿಯು ರದ್ದಾಗಿದೆಯೋ ಅಥವಾ ಯಾವುದಕ್ಕೆ ಈ ಅಧಿನಿಯಮದ 31ನೇ ಪ್ರಕರಣದ ಮೇರೆಗೆ ವಿಶೇಷ ಅಧಿಕಾರಿಯನ್ನು ನೇಮಿಸಲಾಗಿದೆಯೋ;

(ii) ಯಾವ ಸಹಕಾರ ಸಂಘವು 12ನೇ ಪ್ರಕರಣದ ಮೇರೆಗೆ ವಿಘಟಿತವಾಗಬೇಕೆಂದು ಆದೇಶಿಸಲಾಗಿದೆಯೋ;

(iii) ಯಾವ ಸಹಕಾರ ಸಂಘವು ತನ್ನ ಕಾರ್ಯವನ್ನು ಪ್ರಾರಂಭಿಸಿಲ್ಲವೋ ಅಥವಾ ತನ್ನ ಕಾರ್ಯವನ್ನು ನಿಲ್ಲಿಸಿದೆಯೋ;

(iv) ಯಾವ ಸಂಘದ ಪ್ರಧಾನ ಉದ್ದೇಶವು ಸಾಲ ಮತ್ತು ಮುಂಗಡವನ್ನು ನೀಡುವ ಉದ್ದೇಶವನ್ನು ಹೊಂದಿದೆಯೋ,-

(ಎ) ಅಂಥ ಸಂಘದಲ್ಲಿ ನಿಕಟಪೂರ್ವ ಸಹಕಾರಿ ವರ್ಷದ ಚುನಾವಣೆ/ಸಾಮಾನ್ಯ ಸಭೆಯ ಸಂದರ್ಭದಲ್ಲಿ ಸಂಘದ ತಗಾದೆಯ ಮೇಲೆ ಶೇಕಡ ಐವತ್ತಕ್ಕಿಂತ ಕಡಿಮೆ ವಸೂಲಾತಿ ಇದ್ದಲ್ಲಿ ಅಥವಾ

(ಬಿ) ಹಣಕಾಸು ನೀಡುವ ಬ್ಯಾಂಕು, ಕ್ರೆಡಿಟ್ ಏಜೆನ್ಸಿ ಪ್ರಕರಣಕ್ಕನುಗುಣವಾಗಿ ಹದಿನೈದು ದಿನಗಳ ಮುಂಚಿತವಾಗಿ ಆಯಾ ಸಂಸ್ಥೆಯ ತಗಾದೆಯ ಮೇಲೆ ಶೇಕಡ ಐವತ್ತರ ಭಾಗದ ವಸೂಲಿ ಅಥವಾ ವಸೂಲಿಯಾದ ಪೂರ್ತಿ ಮೊತ್ತವನ್ನು

ಇವುಗಳಲ್ಲಿ ಯಾವುದು ಹೆಚ್ಚೋ ಅದನ್ನು ಪಾವತಿಸಲು ವಿಫಲವಾದಲ್ಲಿ ಅಂಥ ಸಂಘಕ್ಕೆ ಸಾಮಾನ್ಯ ಸಭೆ/ಚುನಾವಣೆಯ ಕನಿಷ್ಠ ಮೂವತ್ತು ದಿನಗಳ ಪೂರ್ವದಲ್ಲಿ ನೋಟೀಸ್ ನೀಡತಕ್ಕದ್ದು.

(v) ivನೇ ಉಪಖಂಡದಲ್ಲಿ ಉಲ್ಲೇಖಿಸಿದ ಸಂಘವಲ್ಲದ ಇತರ ಬಾಕಿದಾರ ಸಂಘವಾಗಿದೆಯೋ

- ಆ ಯಾವುದೇ ಸಹಕಾರ ಸಂಘ.

**ವಿವರಣೆ.**- ಸಂಘದ ಸದಸ್ಯನನ್ನು ಸಾಲಗಾರನಾಗಿ ಅವನು, ಅವನಿಗೆ ಹದಿನೈದು ದಿನಗಳಿಗೆ ಕಡಿಮೆಯಿಲ್ಲದ ಸಭೆಗೆ ಸಂಬಂಧಿಸಿದ ನೋಟೀಸನ್ನು ಕೊಟ್ಟ ತರುವಾಯ ಮಹಾಸಭೆಯ ಅಥವಾ ಸಮಿತಿಯ ಸದಸ್ಯರ ಚುನಾವಣೆಯ ದಿನಾಂಕಕ್ಕೆ ಕನಿಷ್ಠ ಮೂವತ್ತು ದಿನಗಳಿಗೆ ಮುಂಚೆ ಸಂಘಕ್ಕೆ ತನ್ನಿಂದ ಬಾಕಿಯಿರುವ ಯಾವುದೇ ಬಗೆಯ ಬಾಕಿಗಳನ್ನು ಸಂದಾಯ ಮಾಡಲು ತಪ್ಪಿದರೆ ಆ ಬಾಕಿದಾರನೆಂದು ಭಾವಿಸತಕ್ಕುದು.

**X X XX XX**

**22.XXX**

**27ಎ. ವ್ಯವಸ್ಥಾಪನೆಯಲ್ಲಿ ಸದಸ್ಯರು ಪಾಲ್ಗೊಳ್ಳುವುದು.**- ಸಹಕಾರ ಸಂಘದ ಪ್ರತಿಯೊಬ್ಬ ಸದಸ್ಯನು,-

(ಎ) ಹಿಂದಿನ ಐದು ವಾರ್ಷಿಕ ಮಹಾಸಭೆಗಳ ಪೈಕಿ ಮೂರು ಮಹಾಸಭೆಗಳಿಗೆ ಹಾಜರಾಗುವ ಮೂಲಕ;

(ಬಿ) ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಬಹುದಾದಂತೆ ಸಂಘವು ನೀಡುವಂಥ ಕನಿಷ್ಠ ಸೇವೆಗಳು, ಅಥವಾ ಸೌಲಭ್ಯಗಳನ್ನು ಪ್ರತಿವರ್ಷ ಬಳಿಸಿಕೊಳ್ಳುವ ಮೂಲಕ,

- ಸಂಘದ ವ್ಯವಸ್ಥಾಪನೆಯಲ್ಲಿ ಪಾಲ್ಗೊಳ್ಳತಕ್ಕದ್ದು:

ಪರಂತು ಒಬ್ಬ ಸದಸ್ಯನು ಕನಿಷ್ಠ ಸೇವೆಗಳನ್ನು ಒಳಸಿಕೊಳ್ಳುಲು ತಪ್ಪಿದರೆ ಅಥವಾ ಕನಿಷ್ಠ ಸಂಖ್ಯೆಯ ಸಭೆಗಳಿಗೆ ಹಾಜರಾಗಲು ತಪ್ಪಿದರೆ, ಅವನು, ಮೂರು ವರ್ಷಗಳ ಅವಧಿಯವರೆಗೆ ಮತ ನೀಡುವ ತನ್ನ ಹಕ್ಕನ್ನು ಕಳೆದುಕೊಳ್ಳತಕ್ಕದ್ದು.

**X X XX XX**

**28. ವಿಶೇಷ ಮಹಾ ಸಭೆ.**- (1) ಸಹಕಾರ ಸಂಘದ ಸಮಿತಿಯು, ಯಾವುದೇ ಸಮಯದಲ್ಲಿ ವಿಶೇಷ ಮಹಾಸಭೆಯನ್ನು ಕರೆಯಬಹುದು ಮತ್ತು ಅಂಥ ಸಭೆಯನ್ನು ರಿಜಿಸ್ಟ್ರಾರನಿಂದ ಅಥವಾ ಒಂದು ನಿರ್ದಿಷ್ಟ ಕಾರ್ಯ ಕಲಾಪವನ್ನು ನಡೆಸಲು 2[xxx]2 ಒಟ್ಟು ಸದಸ್ಯರ ಸಂಖ್ಯೆಯ ಐದನೇ ಒಂದರಷ್ಟು, ಸದಸ್ಯರಿಂದ ನಿಯಮಿಸಬಹುದಾದಷ್ಟು ಪ್ರಮಾಣದ ಸದಸ್ಯರಿಂದ ಲಿಖಿತ ಕೋರಿಕೆಯನ್ನು ಸ್ವೀಕರಿಸಿದ ತರುವಾಯ ಒಂದು ತಿಂಗಳೊಳಗೆ ಕರೆಯತಕ್ಕುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಕೋರಿಕೆಗೆ ಅನುಸಾರವಾಗಿ ಸಹಕಾರ ಸಂಘದ ವಿಶೇಷ ಮಹಾ ಸಭೆಯನ್ನು ಕರೆಯದಿದ್ದರೆ, ರಿಜಿಸ್ಟ್ರಾರನು ಅಥವಾ ಅವನಿಂದ ಈ ಬಗ್ಗೆ ಅಧಿಕೃತನಾದ ಯಾರೇ ವ್ಯಕ್ತಿಯು ಅಂಥ ಸಭೆಯನ್ನು ಕರೆಯಲು ಅಧಿಕಾರ ಹೊಂದಿರತಕ್ಕುದು ಮತ್ತು ಆ ಸಭೆಯನ್ನು ಸಮಿತಿಯಿಂದ ಕರೆಯಲಾದ ಸಭೆ ಎಂದು ಭಾವಿಸತಕ್ಕುದು ಮತ್ತು ಆ ಸಭೆಯು ಸಂಘದ ಉಪವಿಧಿಗಳ ಮೇರೆಗೆ ವಾರ್ಷಿಕ ಮಹಾ ಸಭೆಯಲ್ಲಿ ನಡೆಸಬಹುದಾದ ಎಲ್ಲ ವ್ಯವಹಾರಗಳನ್ನು ಮತ್ತು ರಿಜಿಸ್ಟ್ರಾರನು ಮಾಡಿದ ಕೋರಿಕೆಯಲ್ಲಿ ವಿಶೇಷವಾಗಿ ನಮೂದಿಸಿದ ಇತರ ವ್ಯವಹಾರಗಳನ್ನು ನಡೆಸಲು ಅಧಿಕಾರ ಹೊಂದಿರತಕ್ಕುದು.

**X X XX XX**

**29ಸಿ. ಸಮಿತಿಯ ಸದಸ್ಯತ್ವಕ್ಕೆ ಅನರ್ಹತೆಗಳು.**- (1) ಯಾರೇ ವ್ಯಕ್ತಿಯು ಯಾವುದೇ ಸಹಕಾರ ಸಂಘದ ಸಮಿತಿಯ ಸದಸ್ಯನಾಗಿ ಚುನಾಯಿತನಾಗಲು, ಅಥವಾ ನೇಮಕಗೊಳ್ಳಲು ಅಥವಾ ಮುಂದುವರಿಯಲು,-

(ಎ) ಋಣಿಯಾಗಿ ತನ್ನಿಂದ ಸಲ್ಲಬೇಕಾದ ಯಾವುದೇ ಬಾಕಿಗಳ ಸಂಬಂಧದಲ್ಲಿ ಅವನು ಆ ಸಂಘ ಅಥವಾ ಇತರ ಯಾವುದೇ ಸಹಕಾರ ಸಂಘಕ್ಕೆ ಸುಸ್ತಿದಾರನಾಗಿದ್ದರೆ;

-ಅರ್ಹನಾಗತಕ್ಕುದಲ್ಲ.

**X X XX XX**

(8) ಸಹಕಾರ ಸಂಘದ ಸಮಿತಿಯ ಯಾರೇ ಸದಸ್ಯನು ಅವನ ಅಧಿಕಾರ ಅವಧಿಯಲ್ಲಿ,-

(ಎ) ಅವನು (1), (2) ಮತ್ತು (5)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಅನರ್ಹತೆಗಳಿಗೊಳಪಟ್ಟರೆ; ಅಥವಾ

(ಬಿ) ಅವನು, ಈ ಅಧಿನಿಯಮದ ನಿಯಮಗಳ ಅಥವಾ ಸಹಕಾರ ಸಂಘದ ಉಪವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿ ಮೋಸದಿಂದ ಅಥವಾ ಪೂರ್ಣ ನಿರ್ಲಕ್ಷದಿಂದ ಅಥವಾ ಮಂಜೂರಾತಿಯ ಅಗತ್ಯವಿರುವಾಗ, ಸಹಕಾರ ಸಂಘದ ಸಮಿತಿಯ ಮಂಜೂರಾತಿ ಇಲ್ಲದೆ ಅಥವಾ ಸಹಕಾರ ಸಂಘದ ಅಥವಾ ಅದರ ಸಮಿತಿಯ ನಿರ್ಣಯಗಳಿಗೆ

ವಿರುದ್ಧವಾಗಿ ಅಥವಾ ಸಹಕಾರ ಸಂಘದ ಹಿತಾಸಕ್ತಿಗೆ ಬಾಧಕವಾಗುವಂತೆ ಯಾವುದೇ ರೀತಿಯಲ್ಲಿ ವರ್ತಿಸಿದ್ದರೆ ಅಥವಾ ವರ್ತಿಸುತ್ತಿದ್ದರೆ; ಅಥವಾ

(ಸಿ) ಅವನು ನಿರಂತರವಾಗಿ ಈ ಅಧಿನಿಯಮದ ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಹೊರಡಿಸಲಾದ ನಿರ್ದೇಶಗಳ ಅಥವಾ ಆದೇಶಗಳ ವಿರುದ್ಧವಾಗಿ ವರ್ತಿಸಿದ್ದರೆ ಅಥವಾ ವರ್ತಿಸುತ್ತಿದ್ದರೆ; ಅಥವಾ

(ಡಿ) ಅವನು ತನ್ನ ಕರ್ತವ್ಯಗಳನ್ನು ತೃಪ್ತಿಕರವಾಗಿ ನಿರ್ವಹಿಸುತ್ತಿಲ್ಲದಿದ್ದರೆ, ರಿಜಿಸ್ಟ್ರಾರನು ತನಗೆ ಬಂದ ವರದಿಯ ಮೇರೆಗೆ ಅಥವಾ ಅನ್ಯಥಾ ಅಂತಹ ಸದಸ್ಯನನ್ನು ಆದೇಶದ ಮೂಲಕ ತೆಗೆದುಹಾಕಬಹುದು ಮತ್ತು ಈ ಉಪಕಪ್ರಕರಣದ (ಎ), (ಬಿ), (ಸಿ) ಮತ್ತು (ಡಿ) ಖಂಡಗಳಲ್ಲಿ ಹೇಳಿರುವ ವಿಷಯಗಳ ಬಗ್ಗೆ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಐದು ವರ್ಷಗಳಿಗೆ ಮೀರದಂಥ ಅವಧಿಯವರೆಗೆ ಸಹಕಾರ ಸಂಘದ ಯಾವುದೇ ಪದವನ್ನು ಹೊಂದದಂತೆ ಅವನನ್ನು ಅನರ್ಹಗೊಳಿಸಬಹುದು:

ಪರಂತು, ಯಾರ ವಿರುದ್ಧ ಈ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡಿದ ಹೊರತು ಈ ಉಪಪ್ರಕರಣದ ಮೇರೆಗೆ ಯಾವ ಆದೇಶವನ್ನು ಮಾಡತಕ್ಕುದಲ್ಲ.

XX XX XX

**29ಇ. ಸಮಿತಿಯ ಸದಸ್ಯರ ಪದದಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿಮಾಡುವುದು.-** ಸಹಕಾರ ಸಂಘದ ಸಮಿತಿಯ ಸದಸ್ಯರ ಪದದಲ್ಲಿ ಮರಣ, ರಾಜೀನಾಮೆ, ವಜಾಮಾಡುವಿಕೆ ಅಥವಾ ಇತರ ಕಾರಣದಿಂದ ಉಂಟಾಗುವ ಯಾವುದೇ ಖಾಲಿ ಸ್ಥಾನವನ್ನು ಅಂಥ ಸಂಘದ ಉಪ ವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಭರ್ತಿ ಮಾಡತಕ್ಕುದು.

ಪರಂತು, ಸಹಕಾರಿ ಚುನಾವಣಾ ಆಯೋಗವು ಮಂಡಲಿಯ ಉಳಿದ ಪದಾವಧಿಯು ಅದರ ಮೂಲ ಅವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಮಂಡಲಿಯ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿಮಾಡಲು ಚುನಾವಣೆಯನ್ನು ನಡೆಸತಕ್ಕದ್ದು:

ಮತ್ತು ಪರಂತು, ಮಂಡಲಿಯ ಉಳಿದಿರುವ ಪದಾವಧಿಯು ಅದರ ಮೂಲ ಅವಧಿಯ ಅರ್ಧಕ್ಕಿಂತ ಕಡಿಮೆ ಇರುವಲ್ಲಿ, ಯಾವ ವರ್ಗದ ಸದಸ್ಯರಿಗೆ ಸಂಬಂಧಪಟ್ಟಂತೆ ಸ್ಥಾನವು ಖಾಲಿಯಾಗಿದೆಯೇ ಅದೇ ವರ್ಗದ ಸದಸ್ಯರ ಪೈಕಿ ನಾಮನಿರ್ದೇಶನ ಮಾಡುವ ಮೂಲಕ ಮಂಡಲಿಯಲ್ಲಿನ ಖಾಲಿ ಸ್ಥಾನವನ್ನು ಮಂಡಲಿಯು ಭರ್ತಿ ಮಾಡಬಹುದು.

3[ಅಲ್ಲದೇ ಪರಂತು, ಆಕಸ್ಮಿಕ ರಿಕ್ತತೆಯ ಸ್ಥಾನಗಳನ್ನು ರಿಕ್ತತೆಯಾದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಆಡಳಿತ ಮಂಡಳಿಯು ತುಂಬಲು ವಿಫಲವಾದಲ್ಲಿ ಅಂಥ ರಿಕ್ತ ಸ್ಥಾನವನ್ನು ನಿಬಂಧಕರು ನಾಮನಿರ್ದೇಶನದ ಮೂಲಕ ತುಂಬತಕ್ಕದ್ದು.

XX XX XX

**39ಎಎ. ಸಹಕಾರಿ ಚುನಾವಣಾ ಆಯೋಗ.-** (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ, ಒಬ್ಬ ಸಹಕಾರಿ ಚುನಾವಣಾ ಆಯುಕ್ತ ಮತ್ತು ಒಬ್ಬ ಕಾರ್ಯದರ್ಶಿಯನ್ನು ಒಳಗೊಂಡಿರುವ ಒಂದು ಸಹಕಾರಿ ಚುನವಣಾ ಆಯೋಗವನ್ನು ರಚಿಸತಕ್ಕದ್ದು.

(2) ರಾಜ್ಯದಲ್ಲಿನ ಸಹಕಾರ ಸಂಘಗಳಿಗೆ ನಡೆಯುವ ಎಲ್ಲಾ ಚುನಾವಣೆಗಳನ್ನು ನಡೆಸುವ ಮತ್ತು ತತ್ಸಂಬಂಧಿತ ಮತದಾರರ ಪಟ್ಟಿಗಳನ್ನು ತಯಾರಿಸುವ ಕಾರ್ಯದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ಸಹಕಾರ ಚುನಾವಣಾ ಪ್ರಾಧಿಕಾರ ನಿಹಿತವಾಗಿರತಕ್ಕದ್ದು.

XX XX XX

**39ಐ. ಚುನಾವಣೆಗೆ ಸಂಬಂಧಿಸಿದಂತೆ ಪದೀಯ ಕರ್ತವ್ಯದ ಉಲ್ಲಂಘನೆಗಳು.-** (1) ಈ ಪ್ರಕರಣವು ಅನ್ವಯವಾಗುವ ಯಾರೇ ವ್ಯಕ್ತಿಯು ಯುಕ್ತ ಕಾರಣವಿಲ್ಲದೆ ತನ್ನ ಪದೀಯ ಕರ್ತವ್ಯದ ಉಲ್ಲಂಘನೆಯಾಗುವ ಯಾವುದೇ ಕಾರ್ಯದ ಅಥವಾ ಲೋಪದ ತಪ್ಪಿತಸ್ಥನಾಗಿದ್ದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

XX XX XX

(4) ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳೆಂದರೆ, ರಿಟರ್ನಿಂಗ್ ಆಫೀಸರ್‌ಗಳು, ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರ್‌ಗಳು, ಪ್ರಿಸೈಡಿಂಗ್ ಆಫೀಸರ್‌ಗಳು, ಪೋಲಿಂಗ್ ಆಫೀಸರ್‌ಗಳು ಮತ್ತು ನಾಮನಿರ್ದೇಶನ ಪತ್ರಗಳ ಸ್ವೀಕಾರಕ್ಕೆ ಅಥವಾ ಉಮೇದುವಾರಿಕೆಯ ಹಿಂತೆಗೆದುಕೊಳ್ಳುವುದಕ್ಕೆ ಅಥವಾ ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವುದಕ್ಕೆ ಅಥವಾ ಎಣಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ನೇಮಕಗೊಂಡಿರುವ ಯಾರೇ ಇತರ ವ್ಯಕ್ತಿ; ಮತ್ತು ``ಪದೀಯ ಕರ್ತವ್ಯ" ಎಂಬ ಪದಾವಳಿಯನ್ನು ಈ ಪ್ರಕರಣದ ಉದ್ದೇಶಗಳಿಗಾಗಿ ತದನುಸಾರವಾಗಿ ಅರ್ಥೈಸತಕ್ಕುದು, ಆದರೆ ಅದು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅನ್ಯಥಾ ವಿಧಿಸಲಾದ ಕರ್ತವ್ಯಗಳನ್ನು ಒಳಗೊಂಡಿರತಕ್ಕುದಲ್ಲ.

**XX XX XX**

**68. ರಿಜಿಸ್ಟ್ರಾರನ ಆದೇಶ.-** (1) ರಿಜಿಸ್ಟ್ರಾರನು, ಸಹಕಾರ ಸಂಘ ಅಥವಾ ಅದರ ಪದಾಧಿಕಾರಿಗಳನ್ನು 64ನೇ ಪ್ರಕರಣದ ಮೇರೆಗಿನ ವಿಚಾರಣೆಯಲ್ಲಿ ಅಥವಾ 65ನೇ ಮತ್ತು 65ಬಿ ಪ್ರಕರಣದ ಮೇರೆಗಿನ ಪರಿಶೀಲನೆಯಲ್ಲಿ ಕಂಡುಬಂದ ನ್ಯೂನತೆಗಳನ್ನು ಸರಿಪಡಿಸಲು ಮತ್ತು ಅಕ್ರಮಗಳನ್ನು ಪರಿಹರಿಸಲು ನಿರ್ದೇಶಿಸುವ ಆದೇಶವನ್ನು ಮಾಡಿ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕ್ರಮವನ್ನು ಅದರಲ್ಲಿ ತಿಳಿಸಿದ ಅವಧಿಯೊಳಗೆ ಕೈಗೊಳ್ಳುವಂತೆ ಆ ಮೂಲಕ ನಿರ್ದೇಶಿಸಬಹುದು.

**XX XX XX**

**72. ಸಹಕಾರ ಸಂಘಗಳ ಸಮಾಪನ.-** (1) ರಿಜಿಸ್ಟ್ರಾರನು, 64ನೇ ಪ್ರಕರಣದ ಮೇರೆಗೆ ವಿಚಾರಣೆ ನಡೆಸಿದ ಅಥವಾ 63ನೇ ಪ್ರಕರಣದ ಅಡಿಯಲ್ಲಿ ಲೆಕ್ಕಪರಿಶೋಧನೆ ನಡೆಸಿದ ಅಥವಾ 65ನೇ ಪ್ರಕರಣದ ಮೇರೆಗೆ ಪರಿಶೀಲನೆ ಮಾಡಿದ ತರುವಾಯ ಅಥವಾ ಸಹಕಾರ ಸಂಘದ ಸದಸ್ಯರ ಪೈಕಿ ನಾಲ್ಕನೇ ಮೂರು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಜನ ಸದಸ್ಯರು ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಆ ಸಂಘವನ್ನು ಸಮಾಪನಗೊಳಿಸಬೇಕೆಂದು ಅಭಿಪ್ರಾಯಪಡುವಲ್ಲಿ, ಅವನು ಅದನ್ನು ಸಮಾಪನಗೊಳಿಸಬೇಕೆಂದು ನಿರ್ದೇಶಿಸುವ ಆದೇಶವನ್ನು ಸಹಕಾರಿಗೆ ತನ್ನ ಮನವಿಯನ್ನು ಮಾಡಲು ಅವಕಾಶವನ್ನು ನೀಡಿದ ತರುವಾಯ ಹೊರಡಿಸಬಹುದು.

(2) ರಿಜಿಸ್ಟ್ರಾರನು ತಾನಾಗಿಯೇ -

(ಎ) ಸಂಘದ ಸದಸ್ಯರ ಸಂಖ್ಯೆಯು ಒಂದು ಸಹಕಾರ ಸಂಘದ ನೋಂದಣಿಗೆ ಅಗತ್ಯವಿರುವ ಕನಿಷ್ಠ ಸಂಖ್ಯೆಗಿಂತ ಕಡಿಮೆಯಾಗಿರುವಲ್ಲಿ; ಅಥವಾ

(ಬಿ) ಸಹಕಾರ ಸಂಘವು ಕಾರ್ಯವನ್ನು ಪ್ರಾರಂಭಿಸದಿರುವಲ್ಲಿ ಅಥವಾ ಕಾರ್ಯವನ್ನು ನಿಲ್ಲಿಸಿರುವಲ್ಲಿ; ಅಥವಾ ಅವರ ನೋಂದಣಿಯ ದಿನಾಂಕದ ಆರು ತಿಂಗಳುಗಳೊಳಗೆ ಅಥವಾ ಆರು ತಿಂಗಳುಗಳಿಗೆ ಕಾರ್ಯವನ್ನು ನಿಲ್ಲಿಸಿರುವಲ್ಲಿ;

(ಸಿ) ನೋಂದಣಿ ಮತ್ತು ವ್ಯವಸ್ಥಾಪನ ಬಗ್ಗೆ ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ವಿಧಿಸಿದ ಷರತ್ತುಗಳನ್ನು ಪಾಲಿಸುವುದನ್ನು ಸಹಕಾರ ಸಂಘವು ನಿಲ್ಲಿಸಿರುವಲ್ಲಿ

- ಸಹಕಾರ ಸಂಘವನ್ನು ಸಮಾಪನಗೊಳಿಸುವಂತೆ ನಿರ್ದೇಶಿಸುವ ಆದೇಶವನ್ನು ಮಾಡಬಹುದು.

(3) ಸಹಕಾರ ಸಂಘದ ಅಸ್ತಿತ್ವವು ಮುಂದುವರಿಯತಕ್ಕುದೆಂದು ರಿಜಿಸ್ಟ್ರಾರನು ಅಭಿಪ್ರಾಯಪಟ್ಟಂಥ ಯಾವುದೇ ಸಂದರ್ಭದಲ್ಲಿ, ಯಾವುದೇ ಕಾಲಕ್ಕೆ ಆ ಸಂಘದ ಸಮಾಪನದ ಆದೇಶವನ್ನು ಅವನು ರದ್ದುಪಡಿಸಬಹುದು.

(4) ಈ ಪ್ರಕರಣದಲ್ಲಿ ಏನೇ ಇದ್ದರೂ, ರಿಸರ್ವ್ ಬ್ಯಾಂಕ್‌ನ ಲಿಖಿತ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು, ಯಾವುದೇ ಸಹಕಾರ ಬ್ಯಾಂಕನ್ನು ಸಮಾಪನಗೊಳಿಸತಕ್ಕುದಲ್ಲ ಅಥವಾ ಸಮಾಪನಗೊಳಿಸುವ ಆದೇಶವನ್ನು ರದ್ದುಗೊಳಿಸತಕ್ಕುದಲ್ಲ.

(5) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ರಿಜಿಸ್ಟ್ರಾರನು, ಸಂಘದ ಸಾಮಾನ್ಯ ಸಭೆಯಲ್ಲಿ, ಸಾಮಾನ್ಯ ಸಭೆಯಲ್ಲಿ ಮೂರನೇ ಎರಡು ಬಹುಮತವುಳ್ಳ ಸದಸ್ಯರು ಹಾಜರಿದ್ದು, ಮತದಾನ ಮಾಡಿ, ಹೊರಡಿಸಿದ ಗೊತ್ತುವಳಿಯ ಮೂಲಕ, ಆ ಸಂಘವನ್ನು ಸಮಾಪನಗೊಳಿಸುವುದಕ್ಕೆ ನಿರ್ಧಾರ ಕೈಗೊಂಡಿದ್ದರೆ, ಸಹಕಾರ ಸಂಘವನ್ನು ಸಮಾಪನಗೊಳಿಸುವುದಕ್ಕಾಗಿ ಆದೇಶವನ್ನು ಮಾಡತಕ್ಕದ್ದು.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು. ಪಿ7, ಕಾಸೂ , ಪ್ರತಿಗಳು 500, 23ನೇ ಮಾರ್ಚ್ 2021

## KARNATAKA LEGISLATIVE ASSEMBLY
### FIFTEENTH LEGISLATIVE ASSEMBLY
### NINTH SESSION
### (Adjourned Meeting)

## THE KARNATAKA CO-OPERATIVE SOCIETIES (AMENDMENT) BILL, 2021

### (LA Bill No. 22 of 2021)

A Bill further to amend the Karnataka Co-operative Societies Act, 1959.

Whereas, it is expedient further to amend the Karnataka Co-operative Societies Act, 1959 (Karnataka Act No.11 of 1959) for the purpose hereinafter appearing.

Be it enacted by the Karnataka State Legislature in the seventy second year of the Republic of India as follows:-

**1. Short title and commencement.-** (1) This Act may be called the Karnataka Co-operative Societies (Amendment) Act, 2021.

(2) It shall come into force at once.

**2. Amendment of section 2.-** In the Karnataka Co-operative Societies Act, 1959 (Karnataka Act No.11 of 1959) hereinafter referred to as the principal Act), in section 2, for clause (e-1-a) the following shall be substituted, namely:-

"(e-1-a) "Delegate" means a Director of a Co-operative Society appointed by the Board to represent that Co-operative society in other Co-operative Society with power to participate and vote in the general meeting and to contest or propose or second in the election of the Co-operative society to which he is appointed as delegate."

**3. Amendment of section 6.-** In section 6 of the principal Act, in sub-section (2),-

(i) for clause (b) the following shall be substituted, namely:-

"(b) Where all the applicants are individuals, the number of applicants shall not be less than twenty and the applicants shall not belong to the same family; and

(ii) after clause (b) the following shall be inserted, namely:-

"(b-1) where all the applicants are cooperative societies, the number of applicants shall not be less than thirteen.

Provided that State Government may in special cases permit the applicants co-operative societies less than thirteen."

**4. Amendment of section 17.-** In section 17 of the principal Act,-

(i) in sub-section(1), for clause (f) the following shall be substituted, namely:-

"(f) is a paid employee of the society or its financing bank or its union or its federal society."

(ii) for sub-section (2-A), the following shall be substituted, namely:-

"(2-A) If any person is found to be a member or continuing as member in two or more co-operative societies carrying similar business, it shall be obligatory on his part to retain membership in any one society of his choice within a period of ninety days from the date of commencement of the Karnataka Co-operative Societies (Amendment) Act, 2021. If he fails to do so, his membership shall be deemed to have been ceased in the Co-operative society to which he is newly admitted."

**5. Amendment of section 20.-** In section 20 of the principal Act in sub-section (2),-

(i) in clause (a-iii) for the proviso the following shall be substituted, namely:-

"Provided that nothing in this clause shall apply to member of a society participating in the first General Body Meeting and the first election of the Board of such society held immediately after its registration."

(ii) for clause (a-iv) the following shall be substituted, namely:-

"(a-iv) a member, a representative or a delegate who has failed to attend at least any two annual general meeting out of the last five annual general meetings duly communicated to him;"

(iii) for clause (a-v) except the proviso, the following shall be substituted, namely:-

"(a-v) a member or a representative who has failed to utilize such minimum services or facilities as may be specified in the Bye-Laws for any two Co-operative years out of the last five Co-operative years;"

(iv) in proviso to clause (a-v) for the words "three years" the words "one year" shall be substituted; and

(v) in clause (b) in explanation for the words "fifteen days" and "thirty days" the words "twenty one days" and "forty five days" shall respectively be substituted.

**6. Insertion of new section 22.-** After section 21 of the principal Act, the following shall be inserted, namely:-

**"22. Restrictions on holding shares.-** In any cooperative society, no member other than the Government, or any other cooperative society with the previous sanction of the state Government, the State Warehousing Corporation or Zilla Panchayath constituted under the Karnataka Gram Swaraj and Panchayat Raj Act, 1993 (Karnataka Act No 14 of 1993) or any statutory or non-statutory board, committee or corporation shall hold more than such portion of the total share capital of the society not exceeding five percent thereof as may be prescribed."

**7. Amendment of section 27A.-**In section 27A of the principal Act,-

(i) in clause (a) for the word "three" the word "two" shall be substituted;

(ii) in clause (b) after the words "specified in the byelaws" the words "for any two co-operative years out of the last five co-operative years" shall be inserted; and

(iii) in the proviso for the words "three years" the words "one year" shall be substituted.

**8. Amendment of section 28.-** In section 28 of the principal Act, after sub-section (2) the following shall be inserted, namely:-

"(3) The quorum for the special general meeting shall be the same as specified in sub-section (4) of section 27."

**9. Amendment of section 29C.-** In section 29C of the principal Act,-

(i) in sub-section (1), in clause (a) after the words "co operative society" the words "or Souhardha co-operative" shall be inserted;

(ii) in sub-section (8), in clause (d) for the words "in cases falling under clauses (a), (b), (c) and (d) of this sub-section" the words "in cases falling under clauses (a), (b), (c) and (d) of this sub-section remove and" shall be substituted.

**10. Amendment of section 29E,-** In section 29E of the principal Act, after the first proviso, the following proviso shall be inserted, namely:-

"provided further that the board may fill up casual vacancy of the board by nomination out of the same class of members in respect of which the casual vacancy has arisen till the election is held for such vacancy."

**11. Amendment of section 39AA.-** In section 39AA of the Principal Act, in sub-section (2), for the words "electoral rolls for" the words "electoral rolls and conduct of" shall be substituted.

**12. Amendment of section 39I.-** In section 39I of the principal Act,

(i) in sub-section (4) after the words "this section applies are" the words "the election officers" shall be inserted; and

(ii) after the words "in connection with the" the words "preparation of electoral roll or" shall be inserted.

**13. Amendment of section 68.-** In section 68 of the principal Act, in sub-section (1);-

(i) for the words "The Registrar may" the words "The Registrar shall" shall be substituted; and

(ii) after the word "disclosed" the words "in the audit report under section 63 or" shall be inserted.

**14. Amendment of section 72.-** In section 72 of the principal Act, after sub-section (5) the following shall be inserted, namely;-

"(6) The process of winding up of a co-operative society under sub-sections (1), (2) and (5) above, shall be completed within a period of three years from the date of direction from the Registrar:

Provided that the said period may be extended by the Registrar for the reasons to be recorded in writing for a further period of one year:

Provided further that the State Government may, on a report made by the Registrar shall have power to extend the said period, if it is satisfied that, there are genuine grounds for the extension."

**15. Insertion of section 128-A.-** After section 128 of the Principal Act, the following shall be inserted, namely;-

"**128-A. Constitution of a Common Cadre** (1) Notwithstanding anything contained in this Act, the rules or the bye-laws made there under, where the Registrar in the interest of the co-operative movement, considers that creation of common cadre of employees in primary Agriculture credit Co-operative Society which is substantially financed by the Government or if it is carrying on substantial Government scheme or business of state or central Government or its undertaking (herein after referred to as affiliated society) is necessary, he shall authorize District Central Co-operative Bank to which such class of co-operative societies is affiliated to exercise the power of appointment, transfer and disciplinary action in respect of chief executive of that co-operative societies as may be specified by him and make such regulations as may be necessary for carrying out the said purpose. Where such Federal Cooperative Bank is so authorized by the Registrar, the affiliated cooperative societies shall not have powers to deal with such categories of employees except to the extent the regulation may permit.

(2) The Registrar shall have power to require the affiliated agricultural Cooperative Credit societies to make contribution of such sum every year towards expenditure as the District Central Cooperative Bank is likely to incur or has incurred for the purpose. If any co-operative society fails to pay the said sum to such authority as may be specified by the Registrar and within the time fixed by him the Registrar may on the application of the authority and after such enquiry as he may consider necessary, make an order requiring the affiliated co-operative society to pay the amount and every such order shall be enforceable against the co-operative society as if it were an award under section 71."

**16. Substitution of expression Co-operation Election Authority.-** In the principal Act, for the words "Cooperative Election Commission" wherever they occur, the words "Cooperative Election Authority" shall be substituted.

## STATEMENT OF OBJECTS AND REASONS

It is considered necessary to amend the Karnataka Co-operative Societies Act, 1959 (Karnataka Act No.11 of 1959) to,-

(a) omit some contradictory provisions regarding voting rights and membership in section 17 (2A), section 20 (2)(a-v) and proviso to section 27A;

(b) address the issues challenged in the writ petitions filed before Hon'ble High Court of Karnataka challenging section 20 (2) (a-iv) and (a-v);

(c) inculcate true spirit of democracy in attending general body meetings and utilization of minimum services of cooperative society and active participation of members in the management of co-operative societies; and

(d) implement the suggestions made by the Reserve Bank of India to complete the liquidation process of co-operative bank/societies in time schedule.

Certain consequential amendments are also made to provide clarity.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

## MEMORANDUM REGARDING DELEGATED LEGISLATION

| | |
|---|---|
| **Clause 6:** | Empowers the State Government to make rules regarding such portion of the share capital not exceeding five percent of the total share capital of the society which can be held by a member. |

The proposed delegation of legislative power is normal in character.

**S.T. SOMASHEKAR**
Minister for Co-Operation

**M.K. VISHALAKSHI**
Secretary (I/c)
Karnataka Legislative Assembly

# ANNEXTURE

## EXTRACT FROM THE KARNATAKA CO-OPERATIVE SOCIETIES ACT, 1959

## (KARNATAKA ACT 11 OF 1959)

**XX XX XX**

**2. Definitions:-**In this Act, unless the context otherwise requires,-

**XX XX XX**

(e-1-a) delegate means a member of the board of a Co-operative society appointed by the board to represent that Co-operative Society in other co-operative societies.

**XX XX XX**

**6. Application for registration of co-operative societies.-** (1) An application for the registration of a co-operative society shall be made to the Registrar in such form and after complying with such formalities as may be prescribed; and the applicants shall furnish to him all such information about the society as he may require.

(2) Every such application shall conform to the following requirements, namely:—

(a) the application shall be accompanied by five copies of the proposed bye-laws of the co-operative society;

(b) where all the applicants are individuals, the number of applicants shall not be less than ten;

(c) every one of the applicants who is an individual shall be above the age of eighteen years and the applicants shall not be members of the same family;

**Explanation.**—For the purpose of this clause family in relation t o a person means an individual, wife or husband, as the case may be, and their dependent children and parents;

(d) where the objects of the co-operative society include the creation of funds to be lent to its members and where all the applicants are individuals, the applicants shall reside in the same village or town or in the proposed area of operation of the co-operative society or belong t o the same class or pursue the same occupation;

(e) the application shall be signed by every one of the applicants who is an individual and by a person duly authorized on behalf of any co-operative society which is an applicant.

(f) the application shall be accompanied by such fee as may be prescribed and different fees may be prescribed for different class or classes of co-operative societies.

(g) in the case of the c o-operative which intends to convert itself into a Co-operative Society under this Act, the application shall be accompanied by a resolution of the general meeting of such Co-operative approving such conversion

**XX XX XX**

**17. Disqualification for membership.-** (1) No person shall be eligible for admission as a member of a co-operative society, if he,-

(a) has applied to be adjudicated an insolvent or is an undischarged insolvent; or

(b) has been sentenced for any offence, other than an offence of a political character or an offence not involving moral turpitude, such sentence not having been reversed or the offence pardoned and a period of five years has not elapsed from date of expiry of the sentence.

(c) carries on business of the kind carried on by such co-operative society;

(d) is already a member of a c o-operative society carrying on business of the same kind as itself;

(e) is not eligible for membership under section 16;

(f) is a paid employee of the society or of its financing bank; or

(2) If a member becomes subject to any of the disqualifications specified in subsection (1), he shall be deemed to have ceased to be a member from the date when the disqualification was incurred.

(2A) If a member fails to fulfill his obligations as a member under the Act, rules or bye-laws, for a continuous period of three years, he shall, on the expiry of such period, cease to be a member.

**XX** **XX** **XX**

**20. Votes of members.-** (1) No member, no representative or no delegate of a society shall have more than one vote in the general meeting or in the election of the members of the board of the co-operative society.

(2) The following shall not have the right to vote at a general meeting or an election of the members of the board of the co-operative society in which they are members, namely:—

(a) a nominal or associate member;

(a-i) an individual member who is a defaulter;

(a-ii) members admitted as per clauses (d), (e), (f) and (g) of sub-section (1) of section 16, who are defaulters;

(a-iii) a person who has become member of a society not later than twelve months prior to the date of such meeting or election

Provided that nothing in this clause shall apply to a person of a society participating in the first general body meeting of such society held immediately after its registration;

(a-iv) a member, a representative or a delegate who has failed to attend three general meetings out of the last five general meetings;

(a-v) a member or a representative who has failed to utilize such minimum services or facilities in a co-operative year as may be specified in the byelaws for three consecutive cooperative years.

Provided that in case of members in sub-clauses (a-iv) and (a-v), such members shall not have the right to vote at a general meeting or an election of members of the board for a period of three years.

(b) a co-operative society,—

(i) the board of which stands superseded or to which a special officer is appointed under section 31 of the Act;

(ii) which is ordered to be wound up under section 72;

(iii) which has not commenced working or has ceased to work;

(iv) whose principal object is to advance loans and whose percentage of recovery is, -

(a) less than fifty percent of its total demand for the Co-operative year immediately preceding the Co-operative year during which the meeting or election is held or;

(b) which fails to pass on to the financing bank or the credit agency, as the case may be, fifty percent of the demand or the entire portion of the recovered amount of the demand of the financing bank or credit agency, whichever is higher, at least fifteen days before the date of the general meeting or the date of election, after a notice of not less than thirty days in this regard has been issued to that society

(v) other than the society referred t o in sub-clause (iv), which is a defaulter;

**Explanation.**—A member shall be deemed to be a defaulter if he has failed to pay the arrears of any kind due by him to the society as borrower, or has failed to pay any other amount due by him to the society at least fifteen days before the date of the general meeting or the date of election of the members of the board after a notice of not less than thirty days in this behalf has been issued to him.

**XX XX XX**

**22. x x x**

**XX XX XX**

**27A Participation of members in the management.-** Every member of a cooperative society shall participate in the management of the society,-

(a) by attending three out of the last five annual general meetings;

(b) by utilizing every year such minimum services or facilities offered by the society as may be specified in the byelaws.

Provided that if a member fails to utilize the minimum services or fails to attend the minimum meetings, he shall lose his right to vote, for a period of three years.

**XX XX XX**

**28. Special general meeting.-** (1) The board of a co-operative society may, at any time, call a special general meeting of the society and shall call such meeting within one month after the receipt of a requisition in writing from the Registrar or from one fifth of the total number of members to transact a specified business.

(2) If a special general meeting of a co-operative society is not called in accordance with the requisition referred to in sub-section (1), the Registrar or any person authorized by him in this behalf, shall have the power to call such meeting and that meeting shall be deemed to be a meeting called by the board and shall have power to transact all business which can be transacted at the annual general meeting under the bye-laws of the society and such other business as is specially mentioned in the requisition made by the Registrar.

**XX XX XX**

**29C. Disqualification for membership of the board.-** (1) No person shall be eligible for being elected or appointed or continued as a member of the board of any co-operative society, if,-

(a) he is in default to that society or any other co-operative society in respect of any dues from him as borrower;

**XX XX XX**

(8) If any member of a board of a co-operative society during the term of his office,-

(a) becomes subject to any disqualifications specified in sub-sections (1), (2) and (5); or

(b) has acted or has been acting fraudulently or with gross negligence or in contravention of the provisions of this Act, the rules or the bye-laws of the co-operative society or without the sanction of the board of the co-operative society where such sanction is necessary or contrary to the resolution of the co-operative society or its board or in any way prejudicial to the interest of the co-operative society; or

(c) has acted or has been acting persistently against the directions or orders issued under this Act, rules or bye-laws; or

(d) is not discharging his duties satisfactorily; the Registrar may either on a report made to him or otherwise, by order remove such member, and in cases falling under clauses (a), (b), (c) and (d) of this sub-section disqualify him from holding any office in the co-operative society for such period not exceeding five years, as may be specified in such order:

Provided that no order shall be made under this sub-section unless a reasonable opportunity of being heard, is given to the person against whom the order is to be made.

**XX** **XX** **XX**

**29E. Filling up of casual vacancy in the office of members of the board.-** Any vacancy in the office of members of the board of a co-operative society by reason of death, resignation, removal or otherwise, shall be filled up in such manner as may be specified in the bye-laws of such society.

Provided that the cooperative election commission shall conduct the election to fill up any vacancy in the office of the director of the board if the remaining term of office of the board is more than half of its original term.

Provided further that the board may fill up a casual vacancy on the board by nomination out of the same class of members in respect of which the casual vacancy has arisen, if the remaining term of office of the board is less than half of its original term

Provided also that, if the board fails to fill up such casual vacancy within three months of the date of occurrence, the Registrar shall fill up through nomination

**XX** **XX** **XX**

**39AA Co-operative Election Commission.-** (1)The St at e Government shall, by notification in the Official Gazette, constitute a Cooperative Election Commission consisting of a cooperative election commissioner and a secretary.

(2) The superintendence, direction and control of the preparation of the electoral rolls for all elections to the Co-operative Societies in the Stat e shall be vested with the Co-operative Election Authority.

**XX** **XX** **XX**

**39I. Breaches of official duty in connection with election.-** If any person to whom this section applies is without reasonable cause guilty of any act or omission in breach of his official duty, he shall, on conviction be punished with fine which may extend to five hundred rupees.

**XX** **XX** **XX**

(4) The persons to whom this section applies are the returning officers, assistant returning officers, presiding officers, polling officers and any other person appointed to perform any duty in connection with the receipt of nomination or withdrawal of candidature or the recording or counting of votes at an election and the expression "official duty" shall for the purpose of this section be construed accordingly, but shall not include duties imposed otherwise than by or under this Act.

**XX** **XX** **XX**

**68. Order by the Registrar.-** (1) The Registrar may make an order directing the co-operative society or its office bearers to take such action as may be specified in the order within the time mentioned therein to rectify the defects and remedy the irregularities disclosed in the inquiry under section 64 or inspection under section 65 and 65B.

**XX** **XX** **XX**

**72. Winding up of co-operative societies.-** (1) If the Registrar after an audit has been conducted under section 63 or an inquiry has been held under section 64 or an inspection has been made under section 65 or on receipt of an application made by not less than three-fourths of the members of a co-operative society, is of opinion that the society ought to be wound up, he may, after giving the society an opportunity of making its representation, issue an order directing it to be wound up.

(2) The Registrar may, of his own motion, make an order directing the winding up of a cooperative society,—

(a) where the number of members of the society has been reduced to less than the minimum number required for registration of the co-operative society; or

(b) where the co-operative society has not commenced working 2 [within a period of six months of the date of its registration or has ceased to function for six months or

(c) where the co-operative society has ceased to comply with the conditions imposed by or under this Act regarding registration and management.

(3) The Registrar may cancel an order for the winding up of a co-operative society, at any time, in any case where, in his opinion, the society should continue to exist.

(4) Notwithstanding anything contained in this section, no co-operative bank shall be wound up or an order for winding up shall be cancelled except with the previous sanction in writing of the Reserve Bank.

(5) Notwithstanding anything in this section, the Registrar shall make an order for the winding up of a cooperative society, if the general body of the society, by a resolution passed by two thirds majority of the members present and voting in a general meeting decides for the winding up of that society

**XX** **XX** **XX**

Govt. Press, Vikasa Soudha, Bengaluru, 23rd March, 2021, P7, W.D. , Copies 500